# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1194 |
| ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 15-12-2023 |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿಯಲ್ಲಿ ಹೆಣ್ಣು ಮಕ್ಕಳಿಗೆ ನೀಡಲಾಗುತ್ತಿದ್ದ ಭಾಗ್ಯಲಕ್ಷ್ಮಿ ಯೋಜನೆಯನ್ನು ಮುಂದುವರೆಸಲಾಗಿದೆಯೇ; ಇದ್ದಲ್ಲಿ, ಯಾವ ರೀತಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ; ಮಾಹಿತಿ ನೀಡುವುದು; | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿಯಲ್ಲಿ ಹೆಣ್ಣು ಮಕ್ಕಳಿಗೆ ನೀಡಲಾಗುತ್ತಿರುವ ಭಾಗ್ಯಲಕ್ಷ್ಮಿ ಯೋಜನೆಯನ್ನು ಮುಂದುವರೆಸಲಾಗುತ್ತಿದೆ.<br><br>2006-07 ರಿಂದ 2019-20ನೇ ಸಾಲಿನವರೆಗೆ ಭಾರತೀಯ ಜೀವ ವಿಮಾ ನಿಗಮವು ಪಾಲುದಾರ ಹಣಕಾಸು ಸಂಸ್ಥೆಯಾಗಿದ್ದು, 2020-21ನೇ ಸಾಲಿನಿಂದ ಆಡಳಿತಾತ್ಮಕ ಕಾರಣಗಳಿಂದ ಭಾಗ್ಯಲಕ್ಷ್ಮಿ ಯೋಜನೆಯನ್ನು ಅಂಚೆ ಇಲಾಖೆಯ ಸುಕನ್ಯಾ ಸಮೃದ್ಧಿ ಖಾತೆ ಯೋಜನೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಭಾಗ್ಯಲಕ್ಷ್ಮಿ ಯೋಜನೆಯ ಹೆಸರು, ಮತ್ತು ಫಲಾನುಭವಿಗಳ ನೋಂದಣಿಗೆ ಷರತ್ತುಗಳು ಈ ಹಿಂದಿನಂತೆಯೇ ಮುಂದುವರೆಯುತ್ತವೆ.<br><br>ಮಗು ಜನಿಸಿದ 02 ವರ್ಷಗಳ ಅವಧಿಯವರೆಗೆ ಸೌಲಭ್ಯಕ್ಕೆ ನೋಂದಣಿ ಮಾಡಲು ಕಾಲಾವಕಾಶ ನೀಡಲಾಗಿದೆ.<br><br>ಸದರಿ ಯೋಜನೆಯಡಿ ಬಿಪಿಎಲ್ ಕುಟುಂಬದ 2 ಹೆಣ್ಣು ಮಕ್ಕಳಿಗೆ ಪ್ರತಿ ಮಗುವಿನ ಹೆಸರಿನಲ್ಲಿ ವಾರ್ಷಿಕ ರೂ.3000/-ರಂತೆ 18 ವರ್ಷಗಳವರೆಗೆ ಒಟ್ಟು ರೂ.45,000/-ಗಳನ್ನು ಠೇವಣಿ ಹೂಡಲಾಗುತ್ತದೆ. 21 ವರ್ಷ ಅವಧಿ ಪೂರ್ಣಗೊಂಡ ನಂತರ ಅಂದಾಜು ಪರಿಪಕ್ವ ಮೊತ್ತ ರೂ.1.27ಲಕ್ಷ ನೀಡಲಾಗುತ್ತದೆ. 10ನೇ ತರಗತಿ ನಂತರ ಉನ್ನತ ವಿದ್ಯಾಭ್ಯಾಸಕ್ಕಾಗಿ ಖಾತೆಯಲ್ಲಿರುವ ಮೊತ್ತದ ಶೇ.50ರಷ್ಟು ಭಾಗವನ್ನು ಹಿಂಪಡೆಯಲು ಅವಕಾಶವಿರುತ್ತದೆ. |
| ಆ. | ಈ ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಜನವರಿ-2023 ರಿಂದ ಇಲ್ಲಿಯವರೆಗೂ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಅರ್ಜಿ ಮಾನ್ಯ ಮಾಡಿ ಹಣವನ್ನು ನೀಡಲಾದ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಭಾಗ್ಯಲಕ್ಷ್ಮಿ-ಸುಕನ್ಯಾ ಸಮೃದ್ಧಿ ಯೋಜನೆಯಡಿಯಲ್ಲಿ ಜನವರಿ-2023 ರಿಂದ ಇಲ್ಲಿಯವರೆಗೆ ಬಂದಿರುವ ಅರ್ಜಿಗಳ ಸಂಖ್ಯೆ-140745 ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.<br><br>2023-24ನೇ ಸಾಲಿನಲ್ಲಿ ನವೆಂಬರ್ ಅಂತ್ಯದವರೆಗೆ ಬಿಡುಗಡೆಯಾಗಿರುವ ಅನುದಾನವನ್ನು ಇಲ್ಲಿಯವರೆಗೆ ಸೌಲಭ್ಯ ಪಡೆದಿರುವ ಹಿಂದಿನ ಸಾಲಿನ 3,79,999 ಫಲಾನುಭವಿಗಳ ಖಾತೆಗೆ ರೂ.3000/-ದಂತೆ ಹಣ ಜಮೆ ಮಾಡಲಾಗಿರುತ್ತದೆ.<br><br>ಜನವರಿ-2023 ರಿಂದ ಇಲ್ಲಿಯವರೆಗೂ ನೋಂದಣಿಯಾಗಿ ಉಪನಿರ್ದೇಶಕರ ಹಂತದಿಂದ ಮಂಜೂರಾತಿ ನೀಡಲಾಗುವ ಅರ್ಹ ಮಕ್ಕಳಿಗೆ ತಲಾ ರೂ.3000/-ದಂತೆ 3ನೇ ಕಂತಿನ ಅನುದಾನದಿಂದ ಜಮಾ ಮಾಡಲಾಗುವುದು. |

| | | |
|---|---|---|
| ಇ. | ಈ ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ಒಂದು ಅರ್ಹ ಹೆಣ್ಣು ಮಗುವಿಗೆ ಸರ್ಕಾರ ನೀಡುತ್ತಿರುವ ಹಣ ಎಷ್ಟು ಹಾಗೂ ಅದು ಮೆಚ್ಯುರಿಟಿಗೆ ಬಂದಾಗ ಫಲಾನುಭವಿಗೆ ಸಿಗುವ ಹಣ ಎಷ್ಟು? (ಮಾಹಿತಿ ನೀಡುವುದು) | ಬಿಪಿಎಲ್ ಕುಟುಂಬದ 2 ಹೆಣ್ಣು ಮಕ್ಕಳಿಗೆ ಪ್ರತಿ ಮಗುವಿನ ಹೆಸರಿನಲ್ಲಿ ವಾರ್ಷಿಕ ರೂ.3000/-ರಂತೆ 18 ವರ್ಷಗಳವರೆಗೆ ಒಟ್ಟು ರೂ.45,000/-ಗಳನ್ನು ಠೇವಣಿ ಹೂಡಲಾಗುತ್ತದೆ. 21 ವರ್ಷ ಅವಧಿ ಪೂರ್ಣಗೊಂಡ ನಂತರ ಅಂದಾಜು ಪರಿಪಕ್ವ ಮೊತ್ತ ರೂ.1.27ಲಕ್ಷ ನೀಡಲಾಗುತ್ತದೆ. |

**ಸಂಖ್ಯೆ:ಮಮಇ 195 ಮಮಅ 2023**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

# ಅನುಬಂಧ

ಭಾಗ್ಯಲಕ್ಷ್ಮಿ-ಸುಕನ್ಯಾ ಸಮೃದ್ಧಿ ಯೋಜನೆಯಡಿ ಜನವರಿ-2023 ರಿಂದ ಇಲ್ಲಿಯವರೆಗೆ ಬಂದಿರುವ ಅರ್ಜಿಗಳ ಸಂಖ್ಯೆ ವಿವರ (ಜಿಲ್ಲಾವಾರು ಮಾಹಿತಿ)

| ಕ್ರ.ಸಂ | ಜಿಲ್ಲೆಯ ಹೆಸರು | ನೋಂದಣಿಯಾಗಿರುವ ಅರ್ಜಿಗಳ ಸಂಖ್ಯೆ |
|---|---|---|
| 01 | ಬಾಗಲಕೋಟೆ | 3607 |
| 02 | ಬೆಂ.ನಗರ | 6742 |
| 03 | ಬೆಂ.ಗ್ರಾಮಾಂತರ | 1884 |
| 04 | ಬೆಳಗಾವಿ | 11837 |
| 05 | ಬಳ್ಳಾರಿ | 3904 |
| 06 | ಬೀದರ್ | 8703 |
| 07 | ಬಿಜಾಪುರ | 6123 |
| 08 | ಚಾಮರಾಜನಗರ | 2383 |
| 09 | ಚಿಕ್ಕಮಗಳೂರು | 2726 |
| 10 | ಚಿತ್ರದುರ್ಗ | 4464 |
| 11 | ದಕ್ಷಿಣ ಕನ್ನಡ | 2351 |
| 12 | ದಾವಣಗೆರೆ | 4832 |
| 13 | ಧಾರವಾಡ | 4544 |
| 14 | ಗದಗ | 2806 |
| 15 | ಕಲಬುರಗಿ | 5914 |
| 16 | ಹಾಸನ | 4570 |
| 17 | ಹಾವೇರಿ | 5295 |
| 18 | ಕೊಡಗು | 899 |
| 19 | ಕೋಲಾರ | 4212 |
| 20 | ಕೊಪ್ಪಳ | 2902 |
| 21 | ಮಂಡ್ಯ | 5033 |
| 22 | ಮೈಸೂರು | 6807 |
| 23 | ರಾಯಚೂರು | 6526 |
| 24 | ಶಿವಮೊಗ್ಗ | 4368 |
| 25 | ತುಮಕೂರು | 8406 |
| 26 | ಉಡುಪಿ | 2461 |
| 27 | ಉತ್ತರಕನ್ನಡ | 3751 |
| 28 | ರಾಮನಗರ | 3199 |
| 29 | ಚಿಕ್ಕಬಳ್ಳಾಪುರ | 3820 |
| 30 | ಯಾದಗಿರಿ | 1828 |
| 31 | ವಿಜಯನಗರ | 3848 |
| **ಒಟ್ಟು** | | **140745** |